# ಚಾರಿತ್ರ್ಯ ನಿರ್ಮಾಣ – ಪೋಷಕರ ಪಾತ್ರ

**ಮ**ಗುವಿನ ಚಾರಿತ್ರ್ಯ ನಿರ್ಮಾಣವು ಆರಂಭಗೊಳ್ಳುವುದು ಮನೆಯಲ್ಲಿ. ಒಬ್ಬ ಪೋಷಕರಾಗಿ ಈ ವಿಷಯದಲ್ಲಿ ನೀವು ಕೆಳಗಿನ ಪ್ರಶ್ನೆಗಳನ್ನು ಎದುರಿಸಬೇಕಾಗುವುದು:

೧. ನಿಮ್ಮ ಮಗುವಿನ ಚಾರಿತ್ರ್ಯವನ್ನು ಮೂಡಿಸಲು ಪ್ರಾರಂಭ ಮಾಡುವುದು ಯಾವಾಗ?
೨. ನಿಮ್ಮ ಮಗುವನ್ನು ಬೆಳೆಸುವಾಗ, ನೀವು ಇಟ್ಟುಕೊಳ್ಳಬೇಕಾದ ಆದರ್ಶ ಮನೋಭಾವ ಯಾವುದು?
೩. ಮೌಲ್ಯಗಳನ್ನು ಮಕ್ಕಳಿಗೆ ನೀಡುವುದು ಹೇಗೆ?
೪. ಮನೆಯಲ್ಲಿ ಮಗುವು ಕಲಿತುಕೊಳ್ಳಬೇಕಾದ ಚಾರಿತ್ರ್ಯ ನಿರ್ಮಾಣದ ಅಭ್ಯಾಸಗಳು ಯಾವುವು?

## ನಿಮ್ಮ ಮಗುವಿನ ಚಾರಿತ್ರ್ಯವನ್ನು ಮೂಡಿಸಲು ಪ್ರಾರಂಭ ಮಾಡುವುದು ಯಾವಾಗ?

ಮಗು ಬೆಳೆಯುವ ಹಂತಗಳನ್ನು ನಾವು ತಿಳಿದುಕೊಂಡರೆ, ಅದರ ಚಾರಿತ್ರ್ಯವರ್ಧನೆಯ ಯೋಜನೆಯನ್ನು ರೂಪಿಸಲು ಸಹಾಯಕವಾಗುತ್ತದೆ. ಮನುಷ್ಯನ ಜನ್ಮದಲ್ಲಿ ಗರ್ಭಧಾರಣೆಯಿಂದ ಹಿಡಿದು ಮರಣದವರೆಗೆ ಆರು ಹಂತಗಳನ್ನು ನಾವು ಕಾಣಬಹುದು. ಅವೆಂದರೆ:

೧. **ಗರ್ಭಧಾರಣೆ** ೨. ತಾಯಿಯ ಗರ್ಭದಿಂದ ಈ ಜಗತ್ತಿಗೆ ಬರುವ ಕ್ರಿಯೆ – **ಜನ್ಮ** ೩. ಹೊರಗಿನ ಗಾಳಿ, ನೀರು ಮತ್ತು ಆಹಾರಗಳನ್ನು ಪಡೆದುಕೊಂಡು ಬೆಳೆಯುವುದು ೪. ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗೆ ಹೋಗುವುದು – ಬಾಲ್ಯಾವಸ್ಥೆಯಿಂದ **ಶೈಶವಾವಸ್ಥೆ**; ಅದರಿಂದ **ಯೌವನ**, ಯೌವನದಿಂದ **ಪ್ರಬುದ್ಧಾವಸ್ಥೆ** ಮುಂತಾದವು ೫. ಶರೀರ ಜೀರ್ಣವಾಗುವುದು – **ವೃದ್ಧಾವಸ್ಥೆ** ೬. ದೇಹದ ನಾಶ ಅಥವಾ **ಮರಣ**.

ಈ ಪರಿವರ್ತನೆಗಳ ಸಂಕೋಲೆಯಲ್ಲಿ, ದೇಹ ಮತ್ತು ಮನಸ್ಸುಗಳನ್ನು ೧೮ ನೆಯ ವಯಸ್ಸಿನವರೆಗೆ ಹಲವು ಬಗೆಯ ಪ್ರಭಾವಗಳಿಗೆ ಒಳಪಡಿಸಬಹುದು.

ಬಾಲ್ಯಾವಸ್ಥೆ ( ಹುಟ್ಟಿದಾಗಿನಿಂದ ೫ ನೆಯ ವಯಸ್ಸಿನವರೆಗೆ) ಜಗತ್ತೆಂಬುದು ಒಂದು ಆಟದ ಮನೆಯಂತೆ ಮಗುವಿಗೆ ಕಂಡುಬರುತ್ತದೆ. ಆಗ ಮಗುವು ನಿರಂತರವಾಗಿ ತನ್ನ ಭಾವನೆಗಳನ್ನು ವ್ಯಕ್ತಗೊಳಿಸುತ್ತದೆ. ಬೇರೆಯವರ ಅನುಮತಿಗಾಗಿ ಕಾಯದೆ, ತನ್ನ ಸಹಜ ಬಯಕೆಗಳನ್ನು ಒಡನೆ ತೀರಿಸಿಕೊಳ್ಳಲು ತವಕಿಸುತ್ತದೆ.

ಮಗುವು ಶೈಶವಾವಸ್ಥೆಗೆ ಕಾಲಿಟ್ಟಾಗ (೫–೧೨ ವರ್ಷ), ಜಗತ್ತಿನ ನೈಜ ಅರಿವು ಅದಕ್ಕೆ ನಿಧಾನವಾಗಿ ಉಂಟಾಗುತ್ತದೆ. ಈ ಸಮಯದಲ್ಲಿಯೇ ಅದರ ಮನಸ್ಸಿನಲ್ಲಿ ಬಹಳಷ್ಟು ಸಂಸ್ಕಾರಗಳು ಮನಸ್ಸಿನಲ್ಲಿ ಮೂಡುವುದು. ಈ ಅವಧಿಯಲ್ಲಿ ಮಗುವಿನ ಮನಸ್ಸು ಶಾಯಿಯನ್ನು ಹೀರಿಕೊಳ್ಳುವ ಬಿಳಿ ಕಾಗದದಂತೆ ಇರುತ್ತದೆ.

ಶೈಶವಾವಸ್ಥೆಯಿಂದ ಹದಿಹರಯದ ಸ್ಥಿತಿಗೆ ಬಂದಾಗ, ಮಗುವಿನ ನಡವಳಿಕೆಯಲ್ಲಿ ತುಂಬ ಬದಲಾವಣೆಯನ್ನು ನಾವು ಗಮನಿಸಬಹುದು. ಆಗ ತನ್ನ ಭಾವನೆಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು, ಅವುಗಳನ್ನು ಮೆದುವಾಗಿ ಅವನು ವ್ಯಕ್ತಪಡಿಸುತ್ತಾನೆ. ಹಾಗೆಯೇ ಅಂತಹ ಯುವಕನಲ್ಲಿ ಸಹನಶೀಲತೆ, ಕೊಡುಕೊಳ್ಳುವ ಭಾವನೆಗಳೂ ಕಂಡುಬರುತ್ತವೆ. ಹದಿಹರಯದ ಬಾಲಕ ಅಥವಾ ಬಾಲಕಿ ತನ್ನ ಸುತ್ತಮುತ್ತಲಿನ ಜಗತ್ತಿಗೆ ಪೂರಕವಾಗಿ ತನ್ನ 'ಅಹಂ' ಅನ್ನು ಬೆಳೆಸಿಕೊಳ್ಳುತ್ತಾನೆ/ಳೆ.

ಹದಿಹರಯದಿಂದ ಪ್ರಬುದ್ಧಾವಸ್ಥೆಯವರೆಗೆ ಅಂದರೆ, ೧೮ ನೆಯ ವಯಸ್ಸಿನ ಮೇಲೆ ಒಬ್ಬ ವ್ಯಕ್ತಿಗೆ ಸ್ವಂತಿಕೆ ಬರುತ್ತದೆ. ಅವನು ಆಗ ತನ್ನ ಬಗ್ಗೆ ನಿಶ್ಚಿತ ಧೋರಣೆಗಳನ್ನು ಬೆಳೆಸಿಕೊಳ್ಳುತ್ತಾನೆ.

ನಿಮ್ಮ ಮಗುವಿನ ಬೆಳವಣಿಗೆ ಅದು ಈ ಜಗತ್ತಿಗೆ ಬರುವ ಮೊದಲೇ ಆರಂಭವಾಗಿರುತ್ತದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ.

ಮಗು ಅದು ತಾಯಿಯ ಗರ್ಭದಲ್ಲಿರುವಾಗಲೇ ಜ್ಞಾನ ಮತ್ತು ಸಂಸ್ಕಾರಗಳನ್ನು ಪಡೆಯುತ್ತದೆ ಎಂದು ನಮ್ಮ ಶಾಸ್ತ್ರಗಳು ಹೇಳುತ್ತವೆ. ಅದಕ್ಕೆ ಪ್ರಸಿದ್ಧವಾದ ಉದಾಹರಣೆ ಅಭಿಮನ್ಯು. ಅವನು ಸುಭದ್ರೆ ಮತ್ತು ಅರ್ಜುನರಿಗೆ ಹುಟ್ಟಿದವನು. ಸುಭದ್ರೆಯು ಗರ್ಭವತಿಯಾಗಿರುವಾಗ, ಭಗವಾನ್ ಶ್ರೀಕೃಷ್ಣನು ಯುದ್ಧದ ವ್ಯೂಹರಚನೆಯ ಕೆಲವು ರಹಸ್ಯಗಳನ್ನು ಉಪದೇಶಿಸುತ್ತಿದ್ದನು. ತಾಯಿಯ ಗರ್ಭದಲ್ಲಿ ಬೆಳೆಯುತ್ತಿದ್ದ ಅಭಿಮನ್ಯು ಅದನ್ನು ಕೇಳಿ ಕಲಿತುಕೊಂಡ. ಈ ಜ್ಞಾನವು ಮಹಾಭಾರತ ಯುದ್ಧದಲ್ಲಿ ಅವನಿಗೆ ಉಪಯೋಗಕ್ಕೆ ಬಂದಿತು; ಕ್ಲಿಷ್ಟ ಸಮಯದಲ್ಲಿ ಪಾಂಡವರ ಮಾನವನ್ನು ಕಾಪಾಡುವಲ್ಲಿ ಅದು ಸಹಾಯಕವಾಯಿತು. ಹಾಗೆಯೇ ಅಷ್ಟಾವಕ್ರ ಮಹರ್ಷಿ ಮತ್ತು ಭಕ್ತ ಪ್ರಹ್ಲಾದ – ಇವರೂ ತಮ್ಮ ತಾಯಂದಿರ ಗರ್ಭದಲ್ಲಿ ಇರುವಾಗಲೇ ಬೋಧನೆಯನ್ನು ಪಡೆದುಕೊಂಡ ವಿಷಯ ನಮ್ಮ ಧರ್ಮಗ್ರಂಥಗಳಲ್ಲಿ ಬರುತ್ತದೆ.

'ಧ್ವನಿ ಚಿಕಿತ್ಸೆ' ಎಂಬ ಆಧುನಿಕ ಪ್ರಯೋಗವೂ ಇದನ್ನೇ ಸಾಬೀತು ಪಡಿಸಿದೆ. ಇನ್ನೂ ಹುಟ್ಟಿರದ ಮಕ್ಕಳು ಸಂಗೀತದಿಂದ ಪ್ರಭಾವಕ್ಕೊಳಗಾಗುತ್ತಾರೆ ಎಂದು ಇದರಿಂದ ಗೊತ್ತಾಗಿದೆ. ಈ ಪ್ರಭಾವವು ಮುಂದೆ ಅವರ ಭಾವನೆಗಳನ್ನು ರೂಪಿಸುತ್ತದೆ. ಗರ್ಭಿಣಿಯರು ಶಾಸ್ತ್ರೀಯ ಸಂಗೀತವನ್ನು ಕೇಳಿದಾಗ, ಅವರ ಗರ್ಭದಲ್ಲಿ ಇರುವ ಮಕ್ಕಳು ಬಹಳ ಆರಾಮವಾಗಿ ಇರುತ್ತಾರೆ. ತಾಯಿ ರಾಕ್ ಸಂಗೀತವನ್ನು ಕೇಳಿದಾಗ, ಅದೇ ಮಕ್ಕಳು ಪ್ರಕ್ಷುಬ್ಧರಾಗಿ, ಜೋರಾಗಿ ಕಾಲಿನಿಂದ ಒದೆಯುತ್ತಾರಂತೆ!

ಬಾಲಕರಾಗಿದ್ದಾಗ, ತಮ್ಮ ತಾಯಿಯು ಬೀರಿದ ಪ್ರಭಾವವನ್ನು ಕುರಿತು ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: